46.	4. ಬಲ್ಲೇನಹಳ್ಳಿ	1990–91	ಸಿವಿಲ್ ಕೆಲಸ ಪೂರ್ಣಗೊಂಡಿದ್ದು ಕೊಳವೆ ಬಾವಿಯನ್ನು ಸ್ವಚ್ಛಗೊಳಿಸಿ ನಂತರ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುವುದು.
47.	5. ಕೆಂಚಟವಳ್ಳಿ ಮತ್ತು ಚಿಕ್ಕಗೇಣಿಗೆರೆ	1990–91	ಸಿವಿಲ್ ಕೆಲಸವು ಮುಗಿಯುವ ಹಂತದಲ್ಲಿದ್ದು ವಿದ್ಯುತ್ ಸಂಪರ್ಕವನ್ನು ಒದಗಿಸುವ ಕೆಲಸ ಪ್ರಗತಿಯಲ್ಲಿರುತ್ತದೆ.
48.	6. ಚಿಗಳ್ಳಿ	1990–91	ಸಿವಿಲ್ ಕೆಲಸ ಮತ್ತು ವಿದ್ಯುತ್ ಸಂಪರ್ಕ ಒದಗಿಸುವ ಕೆಲಸ ಪ್ರಗತಿಯಲ್ಲಿದೆ.
49.	7. ಪದುಮನಹಳ್ಳಿ	1989–90	–ಡಿಟ್ಟೋ–
50.	8. ಸಾವಂತನಹಳ್ಳಿ	1989–90	–ಡಿಟ್ಟೋ–
51.	9. ಸತ್ತಿಗರಹಳ್ಳಿ ಕೊಪ್ಪಲು	1990–91	–ಡಿಟ್ಟೋ–
52.	10. ಬನವಾಸೆ	1990–91	–ಡಿಟ್ಟೋ–
53.	11. ಯಡಿಯೂರು	1992–93	–ಡಿಟ್ಟೋ–
54.	12. ದೊಡ್ಡಪುರ	1992–93	–ಡಿಟ್ಟೋ–
55.	13. ತಮ್ಮಾಪುರ	1992–93	–ಡಿಟ್ಟೋ–
56.	14. ಗೊಳೀನಹಳ್ಳಿ	1992–93	–ಡಿಟ್ಟೋ–
57.	15. ಕೊಕ್ಕೇನಘಟ್ಟ	1992–93	–ಡಿಟ್ಟೋ–
58.	16. ಕಲ್ಲಹಳ್ಳಿ	1991–92	ಸಿವಿಲ್ ಕೆಲಸ ಮತ್ತು ವಿದ್ಯುತ್ ಸಂಪರ್ಕ ಒದಗಿಸುವ ಕೆಲಸ ಪ್ರಗತಿಯಲ್ಲಿದೆ.

ರಾಜ್ಯದಲ್ಲಿ ನಾಡ ಕಛೇರಿಗಳು ಕಾರ್ಯ ನಿರ್ವಹಿಸಲು ಖರ್ಚಾಗುತ್ತಿರುವ ಹಣ

1086 (870): ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ):–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಾಡ ಕಛೇರಿಗಳೆಷ್ಟು; ಈ ನಾಡ ಕಚೇರಿಗಳನ್ನು ನಡೆಸಲು ಖರ್ಚಾಗುತ್ತಿರುವ ಹಣವೆಷ್ಟು ? (ವಿವರ ಕೊಡಿ),

ಅ. ಈ ನಾಡ ಕಛೇರಿಗಳನ್ನು ಮುಂದುವರಿಸಬೇಕೆ, ಬೇಡವೇ ಎಂಬ ಬಗ್ಗೆ ಉನ್ನತ ಅಧಿಕಾರಿಗಳ ಒಂದು ಸಮಿತಿಯನ್ನು ರಚಿಸಿದ್ದು ಸಮಿತಿಯು ಈ ವಿಚಾರದಲ್ಲಿ ವರದಿಯನ್ನು ನೀಡಿದೆಯೇ ?

ಇ. ಹಾಗಿದ್ದಲ್ಲಿ, ಅದರ ಶಿಫಾರಸ್ಸುಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. ರಾಜ್ಯಲ್ಲಿ 329 ನಾಡ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ. ಈ ನಾಡ ಕಛೇರಿಗಳನ್ನು ನಡೆಸಲು ಪ್ರತಿ ವರ್ಷ ರೂ. 3,61,36,519ಗಳಷ್ಟು ವೆಚ್ಚವಾಗುತ್ತಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.)

ಆ. ಇನ್ನೂ ನೀಡಿರುವುದಿಲ್ಲ.

ಇ. 'ಆ' ಉತ್ತರದಿಂದ ಉದ್ಭವಿಸುವುದಿಲ್ಲ.

ಅನುಬಂಧ

ರಾಜ್ಯದಲ್ಲಿರುವ ನಾಡ ಕಛೇರಿಗಳು ಹಾಗೂ ಅದಕ್ಕೆ ತಗಲುತ್ತಿರುವ ವಾರ್ಷಿಕ ವೆಚ್ಚ

ಕ್ರ. ಸಂ.	ಜಿಲ್ಲೆ	ನಾಡ ಕಛೇರಿಗಳ ಸಂಖ್ಯೆ	ವಾರ್ಷಿಕ ವೆಚ್ಚ
1.	ಬೆಂಗಳೂರು (ನಗರ)	6	6,76,864–00
2.	ಬೆಂಗಳೂರು (ಗ್ರಾಮಾಂತರ)	16	20,41,763–00
3.	ಕೋಲಾರ	21	22,81,930–00
4.	ತುಮಕೂರು	20	15,93,044–00
5.	ಚಿತ್ರದುರ್ಗ	16	17,44,741–00
6.	ಶಿವಮೊಗ್ಗ	18	20,73,125–00
7.	ಮೈಸೂರು	22	26,35,520–00
8.	ಮಂಡ್ಯ	14	18,14,979–00
9.	ದಕ್ಷಿಣ ಕನ್ನಡ	15	15,71,317–00
10.	ಕೊಡಗು	6	6,09,938–00
11.	ಹಾಸನ	16	1,30,272–00
12.	ಚಿಕ್ಕಮಗಳೂರು	12	15,77,968–00
13.	ಬೆಳಗಾಂ	19	34,20,845–00
14.	ಧಾರವಾಡ	26	42,25,000–00
15.	ಉತ್ತರ ಕನ್ನಡ	19	19,03,900–00
16.	ಬಿಜಾಪುರ	19	16,45,848–00
17.	ಗುಲ್ಬರ್ಗಾ	20	26,34,000–00
18.	ಬಳ್ಳಾರಿ	16	13,98,980–00
19.	ಬೀದರ್	10	8,13,850– 00
20.	ರಾಯಚೂರು	18	13,42,635–00
	ಒಟ್ಟು	329	3,61,36,519–00

ವಿಶ್ವಬ್ಯಾಂಕಿನ ನೆರವಿನಿಂದ ರಾಜ್ಯದಲ್ಲಿ ಕುಡಿಯುವ ನೀರಿನ ಸೌಲಭ್ಯ ಪಡೆದ ಜಿಲ್ಲೆಗಳು

1087 (1562): ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದ ಯಾವ ಯಾವ ಜಿಲ್ಲೆಗಳಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ವಿಶ್ವಬ್ಯಾಂಕ್ ಮತ್ತು ವಿದೇಶಗಳು ಒಟ್ಟು ಎಷ್ಟು ಸಹಾಯ ಧನವನ್ನು ನೀಡಲು ಒಪ್ಪಿಕೊಂಡಿವೆ. (ವಿವರ ನೀಡುವುದು);